**ದಿನಾಂಕಃ 12.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ ಇ ಎನ್ ವಕೀಲರಿಂದಃ**

ನನ್ನ ತಂದೆಯ ಹೆಸರು ಈರಪ್ಪ ಗೌಡ ಮತ್ತು ತಾಯಿಯ ಹೆಸರು ಅಕ್ಕನಾಗಮ್ಮ. ನನ್ನ ತಂದೆಯವರು 1996 ರಲ್ಲಿ ಮೃತರಾಗಿರಬಹುದು. ನನ್ನ ತಂದೆ ತಾಯಿಗೆ ಒಟ್ಟು 4 ಜನ ಗಂಡು ಮಕ್ಕಳು. ನಾನು ಹಿರಿಯ ಮಗ. ನಂತರ ದೇಸಾಯಿ ಗೌಡ, ಗುರುವಯ್ಯ ಗೌಡ ಹಾಗೂ 1 ನೇ ಪ್ರತಿವಾದಿ. ಅವರಲ್ಲಿ ದೇಸಾಯಿ ಗೌಡ ರು ಸುಮಾರು 15−20 ವರ್ಷ ಆಯಿತು ಮತ್ತು 3−4 ವರ್ಷಗಳ ನಂತರ ಗುರುವಯ್ಯ ಗೌಡರು ಮೃತಪಟ್ಟಿರುತ್ತಾರೆ. ನನ್ನ ತಂದೆ ಈ ಇಬ್ಬರೂ ಸಹೋದರರು ತೀರಿಕೊಳ್ಳುವ ಮುಂಚೆ ತೀರಿಕೊಂಡಿರುತ್ತಾರೆ. ನನ್ನ ತಂದೆಯವರು ತೀರಿಕೊಳ್ಳುವವರೆಗೂ ಹಿಸ್ಸೆ ಆಗಿರಲಿಲ್ಲ. ದೇಸಾಯಿ ಗೌಡರವರಿಗೆ 2 ಜನ ಹೆಂಡತಿಯರು. ಮೊದಲನೆ ಹೆಂಡತಿಯ ಹೆಸರು ಜಯಮ್ಮ ಹಾಗೂ 2 ನೇ ಹೆಂಡತಿ ವಿನೋದಮ್ಮ. ಮೊದಲನೇ ಹೆಂಡತಿ ಜಯಮ್ಮ ಜೀವಂತ ಇರುವಾಗಲೇ ದೇಸಾಯಿ ಗೌಡರು ವಿನೋದಮ್ಮರವರನ್ನು ಮದುವೆ ಆಗಿರುತ್ತಾರೆ. ಮೊದಲನೆ ಹೆಂಡತಿ ಜಯಮ್ಮ ಈ ದಾವೆಯಲ್ಲಿ 2 ನೇ ಪ್ರತಿವಾದಿ. ಅವರಿಗೆ 2 ಜನ ಗಂಡು ಮಕ್ಕಳು. ಸಂತೋಷ ಹಾಗೂ ವಿನಯ. ಅದೇ ರೀತಿ 2 ನೇ ಹೆಂಡತಿ ವಿನೋದಮ್ಮ ನಿಗೆ ಒಬ್ಬ ಮಗ ಮನು. ಇವರೆಲ್ಲರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಗುರುವಯ್ಯ ಗೌಡ ರು ಕಮಲಮ್ಮ ರವರನ್ನು ಮದುವೆ ಆಗಿದ್ದು,

ಅವರು ಈ ದಾವೆಯಲ್ಲಿ 3 ನೇ ಪ್ರತಿವಾದಿಯಾಗಿರುತ್ತಾರೆ. ಅವರಿಗೆ 2 ಜನ ಗಂಡು ಮಕ್ಕಳು. ಅವರೆಂದರೆ ಮಧುಕೇಶ್ವರ ಮತ್ತು ಮಂಜುನಾಥ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ದೇಸಾಯಿ ಗೌಡ ಮತ್ತು ಜಯಮ್ಮರವರ ಹಿರಿಯ ಮಗ ಸಂತೋಷ ಹಿರಿತನ ಮಾಡುತ್ತಾನೆ ಅಂದರೆ ಸರಿ. ಅದೇ ರೀತಿ ಗುರುವಯ್ಯ ಗೌಡ ಮತ್ತು ಕಮಲಮ್ಮರವರ ಮಗನಾದ ಮಂಜುನಾಥ ಹಿರಿತನ ಮಾಡುತ್ತಾರೆ ಅಂದರೆ ಸರಿ.

2. ದಾವಾ ಆಸ್ತಿ ಸ.ನಂ.128 ಒಟ್ಟು ವಿಸ್ತೀರ್ಣವು 28 ಎಕರೆ 29 ಗುಂಟೆ ಜಮೀನು ಇರುತ್ತದೆ ಅಂದರೆ ಸರಿ. ಸದರಿ ಸರ್ವೇ ನಂಬರಿನಲ್ಲಿ ಪೋಡ್ ಆಗಿ 6 ಭಾಗ ಆಗಿರುತ್ತದೆ. ಸ.ನಂ.128/1 5 ಎಕರೆ 27 ಗುಂಟೆ ಜಮೀನು ಚನ್ನಮ್ಮ ಕೋಂ ಕರಿಯಪ್ಪರವರ ಹೆಸರಿನಲ್ಲಿ ಇದೆ ಅಂದರೆ ಸರಿ. ಸ.ನಂ.128/2 3 ಎಕರೆ 22 ಗುಂಟೆ ಜಮೀನು ಪುಟ್ಟಪ್ಪ ಗೌಡ ಅಂದರೆ ಈ ದಾವೆಯ 1 ನೇ ಪ್ರತಿವಾದಿಯವರ ಹೆಸರಿನಲ್ಲಿ ಇದೆ ಅಂದರೆ ಸರಿ. ಸಾಕ್ಷಿಯು ಮುಂದುವರೆದು ಅಕ್ಕನಾಗಮ್ಮನಿಂದ ಅವರ ಹೆಸರಿನಲ್ಲಿ ಬಂದಿರುತ್ತದೆ ಎಂದು ಉತ್ತರಿಸುತ್ತಾರೆ. ಸ.ನಂ.128/3 4 ಎಕರೆ 20 ಗುಂಟೆ ಜಮೀನು 2 ಮತ್ತು 3 ನೇ ಪ್ರತಿವಾದಿಯವರ ಹೆಸರಿನಲ್ಲಿ ಜಂಟಿಯಾಗಿ ಇದೆ ಅಂದರೆ ಸರಿ. ಅದು ಮೂಲತಃ ದೇಸಾಯಿ ಗೌಡ ರ ಹಿಸ್ಸೆ ಅಂದರೆ ಸರಿ. ಸ.ನಂ.128/4 5 ಎಕರೆ 20 ಗುಂಟೆ ಜಮೀನು ಗುರುವಯ್ಯ ಗೌಡ ರ ಹಿಸ್ಸೆ ಜಮೀನು ರಾಜು ಬಿ ತಂದೆ ಬುಕ್ಕನ ಬಸವಣ್ಣಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ ಅಂದರೆ ಸರಿ. ಅದೇ ರೀತಿ ಸ.ನಂ.128/5 4 ಎಕರೆ

ನನ್ನ

ಹಿಸ್ಸೆಗೆ ಬಂದಿದ್ದು, ಅದನ್ನು ಡಿ ವಿ ಬಸವನಗೌಡರವರಿಗೆ ಮಾರಾಟ ಮಾಡಿರುತ್ತೇನೆ. ಅದೇ ರೀತಿ ಸ.ನಂ.128/6 5 ಎಕರೆ 20 ಗುಂಟೆ ಜಮೀನು 1 ನೇ ಪ್ರತಿವಾದಿಯವರ ಹೆಸರಿನಲ್ಲಿ ಇದೆ ಅಂದರೆ ಸರಿ. ಸ.ನಂ.128/1 ರ ಮಾಲೀಕರಾದ ಚನ್ನಮ್ಮ ಕೋಂ ಕರಿಯಪ್ಪ ನಮ್ಮ ಕುಟುಂಬಕ್ಕೆ ಯಾವುದೇ ಸಂಬಂಧ ಇಲ್ಲ. ಸ.ನಂ.128/2 ರಿಂದ 128/6 ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಆಸ್ತಿಗಳು ಅಂದರೆ ಸರಿ. ನನ್ನ ತಂದೆ ದಿಃ 27.12.1994 ತೀರಿಕೊಂಡರು ಅಂದರೆ ಸರಿ. ನನ್ನ ತಾಯಿ ದಿಃ 18.07.2019 ರಂದು ತೀರಿಕೊಂಡಿರುತ್ತಾರೆ ಅಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ 2 ವರ್ಷಗಳ ನಂತರ ದಿಃ 02.05.1996 ರಂದು ನನ್ನ ತಾಯಿ ಮತ್ತು ನಮ್ಮ ಎಲ್ಲಾ ಸಹೋದರರ ನಡುವೆ ನೊಂದಾಯಿತ ಹಿಸ್ಸಾ ಪತ್ರದ ಮೂಲಕ ಹಿಸ್ಸೆ ಮಾಡಿಕೊಂಡಿರುತ್ತೇವೆ. ಹಿಸ್ಸಾ ಪತ್ರದ ಮೂಲಕ ಖಾತೆ ಬದಲಾವಣೆಯೂ ಸಹ ಆಗಿರುತ್ತದೆ. ನಾವು ಕಂದಾಯವನ್ನು ಸಹ ಪಾವತಿಸಿರುತ್ತೇವೆ. ಸ.ನಂ.128/5 ನನ್ನ ಹಿಸ್ಸೆ ಬಂದಿದ್ದ ಜಮೀನಿನಲ್ಲಿ ಕೊಳವೆ ಬಾವಿ ತೆಗೆಸಿ, ತೋಟ ಮಾಡಿರುತ್ತೇನೆ ಅಂದರೆ ಸರಿ. ಅದೇ ರೀತಿ ಸ.ನಂ.128/6 ರಲ್ಲಿ 1 ನೇ ಪ್ರತಿವಾದಿ ಕೊಳವೆ ಬಾವಿ ಮಾಡಿಸಿಕೊಂಡು ಅಡಿಕೆ ತೋಟ ಮಾಡಿಕೊಂಡಿರುತ್ತಾರೆ ಅಂದರೆ ಸರಿ. ಅದು ಈಗ ಫಸಲಿಗೆ ಬಂದಿದೆ ಅಂದರೆ ಸರಿ. ದಿಃ 02.05.1996 ರಲ್ಲಿ ಆದಂತಹ ಹಿಸ್ಸೆ ಪ್ರಕಾರ ಸ.ನಂ.128/4 5 ಎಕರೆ 20 ಗುಂಟೆ ಜಮೀನನ್ನು ದಿಃ 30.01.2016 ರಂದು ನೊಂದಾಯಿತ ಕ್ರಯ ಪತ್ರದ ಮೂಲಕ ರಾಜು ಬಿ ತಂದೆ ಬುಕ್ಕನ ಬಸವಂತಪ್ಪನಿಗೆ

ಮಾರಾಟ ಮಾಡಿರುತ್ತಾರೆ ಅಂದರೆ ಸರಿ. 2 ನೇ ಪ್ರತಿವಾದಿ ಜಯಮ್ಮ ಸ.ನಂ.128/3 ರ 4 ಎರಕೆ 20 ಗುಂಟೆ ಪೈಕಿ 3 ಎಕರೆ ಜಮೀನನ್ನು 2 ನೇ ಪ್ರತಿವಾದಿ ಹಾಗೂ ಅವಳ ಮಕ್ಕಳು ಮತ್ತು ಇನ್ನುಳಿದ 1 ಎಕರೆ 20 ಗುಂಟೆ ಜಮೀನನ್ನು ದೇಸಾಯಿಗೌಡ ರವರ 2 ನೇ ಹೆಂಡತಿ ವಿನೋದಮ್ಮ ಹಿಸ್ಸೆ ಮಾಡಿಕೊಂಡಿರುತ್ತಾರೆ ಅಂದರೆ ಸರಿ. ದಿಃ 02.05.1996 ರಲ್ಲಿ ಆದಂತಹ ಹಿಸ್ಸೆ ಪತ್ರದ ಪ್ರಕಾರ ಸ.ನಂ.128/2 ರಲ್ಲಿ 3 ಎಕರೆ 22 ಗುಂಟೆ ಅಕ್ಕನಾಗಮ್ಮನ ಹೆಸರಿಗೆ ವಿಂಗಡಿಸಿದ ಆಸ್ತಿಯಾಗಿರುತ್ತದೆ ಅಂದರೆ ಸರಿ. ಸದರಿ ಅಸ್ತಿಯನ್ನು ದಾವೆಯಲ್ಲಿ 3 ಎಕರೆ 28 ಗುಂಟೆ ಎಂದು ನಮೂದಿಸಿರುತ್ತೀರಿ ಅಂದರೆ ಸಾಕ್ಷಿಯು ಪಹಣಿಯಲ್ಲಿರುವಂತೆ ನಮೂದಿಸಿರುತ್ತೇವೆ ಎಂದು ಉತ್ತರಿಸುತ್ತಾರೆ. ನಿಪಿ-1 ಪಹಣಿ ಪತ್ರಿಕೆಯಲ್ಲಿಯೂ ಸಹ 3 ಎಕರೆ 22 ಗುಂಟೆ ಎಂದು ನಮೂದು ಇದೆ ಅಂದರೆ ಸಾಕ್ಷಿಯು ಅದು ತಪ್ಪಾಗಿ ನಮೂದು ಇದೆ ಎಂದು ಉತ್ತರಿಸುತ್ತಾರೆ.

3. ನನ್ನ ತಂದೆಗೆ ನಾಗಮ್ಮ ಎನ್ನುವ ಸಹೋದರಿ ಇದ್ದರು ಅಂದರೆ ಸರಿ. ಅವರಿಗೆ ಕುಪ್ಪಗಡ್ಡೆ ಹೋಬಳಿ ಜಡೆ ಗ್ರಾಮದ ರಾಮನಗೌಡರಿಗೆ ಕೊಟ್ಟು ಮದುವೆ ಮಾಡಿರುತ್ತಾರೆ ಅಂದರೆ ಸರಿ. ಅವರಿಗೆ ಮಕ್ಕಳು ಇಲ್ಲ ಅಂದರೆ ಸರಿ. ಅವರು ನನ್ನನ್ನು ದತ್ತು ಪಡೆಯಲು ಪ್ರಯತ್ನಿಸಿದ್ದು, ಆಗ ನನಗೆ ವಯಸ್ಸಾದ ಕಾರಣ ದತ್ತು ಮಾಡಿಕೊಳ್ಳುವ ಬದಲು ಸ.ನಂ.38 ರ 4 ಎಕರೆ 34 ಗುಂಟೆ ಜಮೀನನ್ನು ದಾನಪತ್ರ ಮಾಡಿಕೊಟ್ಟಿರುತ್ತಾರೆ ಅಂದರೆ ಸರಿ. ಅದಕ್ಕೆ ನಾನೇ ಮಾಲೀಖ ಅಂದರೆ ಸರಿ. ಸದರಿ ಸಂಗತಿಯನ್ನು ದಾವೆಯಲ್ಲಿ ತಿಳಿಸಿಲ್ಲ. ಸದರಿ

ಜಮೀನಿನಲ್ಲಿ ಒಂದು ಒಳ್ಳೆ ಮನೆಯನ್ನು ಕಟ್ಟಿಸಿಕೊಂಡಿರುತ್ತೀರಿ ಅಂದರೆ ಸರಿ. ಸದರಿ ಮನೆಯಲ್ಲಿ ಹಿಸ್ಸೆ ಆದ ದಿನದಿಂದ ವಾಸವಾಗಿರುತ್ತೀರಿ ಅಂದರೆ ಸಾಕ್ಷಿಯು ಹೌದು ಎಂದು ಉತ್ತರಿಸುತ್ತಾರೆ. ಅದೇ ರೀತಿ 3 ನೇ ಪ್ರತಿವಾದಿಯೂ ಸಹ ಸಾಗರದ ಭೀಮನಕೋಣೆಯಲ್ಲಿ ವಾಸವಾಗಿರುತ್ತಾರೆ ಅಂದರೆ ಸರಿ. ನಮ್ಮ ಮೂಲ ಹಳೆ ಮನೆಯಲ್ಲಿ 1 ನೇ ಪ್ರತಿವಾದಿಯವರು ನಮ್ಮ ತಾಯಿ ಅಕ್ಕನಾಗಮ್ಮನವರ ಜೊತೆ ವಾಸವಾಗಿರುತ್ತಾರೆ ಅಂದರೆ ಸರಿ. ಅದು ಈಗ ಬಿದ್ದು ಹೋಗಿದ್ದು, ಅವರು ಅರ್ಧ ಮನೆಯನ್ನು ಕಟ್ಟಿಕೊಂಡು ವಾಸವಾಗಿರುತ್ತಾರೆ ಅಂದರೆ ಸರಿ. ಅದೇ ಸ್ವತ್ತಿನಲ್ಲಿ 1 ನೇ ಪ್ರತಿವಾದಿಯು ಜಂಬಿಟ್ಟಿಗೆ ಕಲ್ಲಿನಿಂದ ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆ ಅಂದರೆ ಸರಿ. ನನ್ನ ತಾಯಿ ಅಲ್ಲೇ ತೀರಿಕೊಂಡಿರುತ್ತಾರೆ ಅಂದರೆ ಸರಿ. 2 ನೇ ಪ್ರತಿವಾದಿಯು ತವರು ಮನೆ ಶಿರಸಿ ತಾಲ್ಲೂಕಿನ ತಿಗಣಿ ಗ್ರಾಮದಲ್ಲಿ 2 ಮಕ್ಕಳೊಂದಿಗೆ ವಾಸವಾಗಿರುತ್ತಾರೆ ಅಂದರೆ ಸರಿ. ಅವರ ಜಮೀನನ್ನು ನಾನೇ ಸಾಗುವಳಿ ಮಾಡುತ್ತಿದ್ದೇನೆ. ಅಕ್ಕನಾಗಮ್ಮ ಯಾವುದೇ ಕಾಲಕ್ಕೂ ನನ್ನ ಜೊತೆ, 2 ಮತ್ತು 3 ನೇ ಪ್ರತಿವಾದಿಯವರ ಜೊತೆಗೆ ವಾಸವಾಗಿರುವುದಿಲ್ಲ ಅಂದರೆ ಸುಳ್ಳು. ಸ.ನಂ.128 ರಲ್ಲಿ ಹಿಸ್ಸೆಗೆ ಬಂದಂತಹ ಜಮೀನನ್ನು ನಾನು, ದೇಸಾಯಿ ಗೌಡರವರ ವಾರಸುದಾರರು ಮಾರಿಕೊಂಡಿರುತ್ತಾರೆ ಅಂದರೆ ಸರಿ. ನನ್ನ ತಾಯಿಯು 86 ನೇ ವಯಸ್ಸಿನಲ್ಲಿ ಮರಣ ಹೊಂದಿರುತ್ತಾರೆ ಅಂದರೆ ಸರಿ. ಅಲ್ಲಿಯವರೆಗೂ ಅವರು ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಿದ್ದರು ಅಂದರೆ ಸರಿ. ನನ್ನ ತಂದೆ ತೀರಿಕೊಂಡ 2

ವರ್ಷಗಳ ನಂತರ ಮಾಡಿಕೊಂಡ ಹಿಸ್ಸೆ ಪತ್ರಕ್ಕೆ ಬಸವರಾಜ ಗೌಡ ಮತ್ತು ಬಾಸೂರು ಗ್ರಾಮದ ಚಂದ್ರಶೇಖರ ಗೌಡರವರು ಮಾತ್ರ ಭಾಗವಹಿಸಿದ್ದರು ಅಂದರೆ ಸರಿ. ನಮ್ಮೆಲ್ಲರಿಗೂ ಅನ್ಯಾಯ ಆಗಬಾರದು ಎಂದು ಒಪ್ಪಿಕೊಂಡು ಹಿಸ್ಸೆ ಪತ್ರವನ್ನು ಮಾಡಿಕೊಂಡಿರುತ್ತೇವೆ. ನಾವೆಲ್ಲರೂ ಬೇರೆ ಬೇರೆಯಾಗಿ ವಾಸವಾಗಿದ್ದು, ನನ್ನ ತಾಯಿ ಮಾತ್ರ 1 ನೇ ಪ್ರತಿವಾದಿಯವರೊಂದಿಗೆ ವಾಸವಾಗಿದ್ದರು ಅಂದರೆ ಸರಿಯಲ್ಲ. ದಿಃ 05.02.2013 ರಂದು ತನ್ನ ಹೆಸರಿಗೆ ಬಂದಿದ್ದ ಜಮೀನನ್ನು ತಾಯಿಯು 1 ನೇ ಪ್ರತಿವಾದಿಯ ಪರವಾಗಿ ದಾನಪತ್ರ ಮಾಡಿರುತ್ತಾರೆ ಅಂದರೆ ಸರಿ. ನಂತರ ರಾಜಸ್ವ ದಾಖಲೆಗಳಲ್ಲಿ 1 ನೇ ಪ್ರತಿವಾದಿಯವರ ಹೆಸರು ದಾಖಲಾಗಿರುತ್ತದೆ ಅಂದರೆ ಸರಿ. ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲ. 1 ನೇ ಪ್ರತಿವಾದಿಯವರಿಗೆ ತೊಂದರೆ ನೀಡಲು ನೀವು ವ್ಯಾಜ್ಯ ಮಾಡುತ್ತಿದ್ದೀರಿ ಅಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**
**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಸಿ/ಸಿ ಹೆಚ್ಚುವರಿ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**